17)	ಕದಿರೇನಹಳ್ಳಿ	20,741.00
18)	ಬೈರೇಗೌಡನಹಳ್ಳಿ	24,549.00
		7,70,590.00

ಅಧ್ಯಕ್ಷರು – ಪ್ರಶ್ನೆ ಸಂಖ್ಯೆ :103 (320)ನ್ನು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಿಂದ ಕಂದಾಯ ಇಲಾಖೆಗೆ ವರ್ಗ ಮಾಡಲಾಗಿದೆ.

ಶ್ರೀ ಮಲ್ಲಾರಿ ಗೌಡ ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ ಇದು ಜಿಲ್ಲಾ ಪರಿಷತ್ತು ವ್ಯಾಪ್ತಿಗೆ ಬರುತ್ತದೆ. ಕಂದಾಯ ಇಲಾಖೆಗೆ ಹೇಗೆ ವರ್ಗ ಮಾಡಿದ್ದಾರೋ ಗೊತ್ತಿಲ್ಲ?

ಶ್ರೀ ಬಿ. ಬಸವಲಿಂಗಪ್ಪ: ಇದನ್ನು ಸ್ಕೇರ್‌ಸಿಟಿ ವರ್ಕ್ಸ್‌ನಲ್ಲಿ ತೆಗೆದುಕೊಂಡಿರುವುದರಿಂದ ಕಂದಾಯ ಇಲಾಖೆಗೆ ವರ್ಗ ಆಗಿದೆ.

* * *

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಇದು ಜಿಲ್ಲಾ ಪರಿಷತ್ತು ಮಾಡುವ ಕೆಲಸ ತಾವೇ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ: ಇದನ್ನು ಜಿಲ್ಲಾ ಪರಿಷತ್ತಿನವರೇ ಮಾಡುವುದಾದರೆ ನಾನು ಮಾಡಿಸಿಕೊಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ ಸುಮಾರು 14–15 ವರ್ಷಗಳಿಂದ ಈ ಕೆಲಸ ಹಾಗೆ ಉಳಿದಿದೆ. ಲೋಕೋಪಯೋಗಿ ಇಲಾಖೆಯಿಂದ ಈಗ ಜಿಲ್ಲಾ ಪರಿಷತ್ತಿಗೆ ಬಂದಿದೆ. ಜಿಲ್ಲಾ ಪರಿಷತ್ತಿನವರು ಅಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಆದ್ದರಿಂದ ಅದು ಹಾಗೆಯೇ ಮುಂದುವರಿಯುತ್ತಿದೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ತಾವು ನಿರ್ದಿಷ್ಟವಾಗಿ ಯಾವಾಗ ಕೆಲಸ ಪ್ರಾರಂಭ ಮಾಡಿಸಿಕೊಡುತ್ತೀರಿ ಎನ್ನುವ ಆಶ್ವಾಸನೆ ಬೇಕು ಅಲ್ಲಿನ ಜನರು ಕೂಡ ಸಂತೋಷ ಪಡುತ್ತಾರೆ. ಇದು ಮಹಾರಾಷ್ಟ್ರ ಬಾರ್ಡರ್ ಏರಿಯಾದಲ್ಲಿ ಕೂಡ ಬರುತ್ತದೆ. ತಾವೇನು ಉತ್ತರ ಕೊಡುತ್ತೀರಿ ಎಂದು ನಾವು ಕಾತುರದಿಂದ ನೋಡುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ : ನಾನು ಆಗಲೇ ಹೇಳಿದ್ದೇನೆ. ಇದು ಜಿಲ್ಲಾಪರಿಷತ್ ವ್ಯಾಪ್ತಿಗೆ ಬರುವುದಾದರೆ ಅದನ್ನು ತಕ್ಷಣವೇ ಮಾಡಿಸಿಕೊಡುತ್ತೇನೆ.

ರಾಜ್ಯದಲ್ಲಿ ಕಳ್ಳ ಸಾಗಾಣಿಕೆದಾರರಿಂದ ವಶಪಡಿಸಿಕೊಂಡ ಗಂಧದ ಮರಗಳ ಮೊತ್ತ

519. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):– ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಕಳ್ಳಸಾಗಾಣಿಕೆದಾರರಿಂದ ಅರಣ್ಯ ಇಲಾಖೆಯು ವಶಪಡಿಸಿಕೊಂಡ ಶ್ರೀಗಂಧದ ಮರಗಳ ಒಟ್ಟು ಮೊತ್ತವೆಷ್ಟು?

ಆ) ಇದರ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಖಾಸಗಿ ಕ್ಷೇತ್ರದಲ್ಲಿ ಶ್ರೀಗಂಧದ ಮರ ಬೆಳೆಸಲು ಮಲೆನಾಡು ಜಿಲ್ಲೆಗಳಿಗೆ ಅವಕಾಶ ನೀಡಲಾಗುವುದೇ?

ಶ್ರೀ ಇ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) 1033.463 ಟನ್‌ಗಳು. ಇದರ ಅಂದಾಜು ಮೊತ್ತ ಹದಿನೆಂಟು ಕೋಟಿ ರೂಪಾಯಿಗಳು.

ಆ) ಕರ್ನಾಟಕ ರಾಜ್ಯದ ಸರ್ಕಾರಿ ಶ್ರೀಗಂಧದ ಎಣ್ಣೆ ಕಾರ್ಖಾನೆಗಳಿಗೆ, ಕುಶಲಕರ್ಮಿಗಳಿಗೆ ಹಾಗೂ ದೇವಸ್ಥಾನಗಳಿಗೆ ಸರಬರಾಜು ಮಾಡಲಾಗುತ್ತಿದೆ. ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಮುಖಾಂತರ ಹೊರ ದೇಶಗಳಿಗೆ ನೇರವಾಗಿ ರಫ್ತು ಮಾಡಲು ಪ್ರಯತ್ನಿಸಲಾಗುತ್ತಿದೆ. ಇದಲ್ಲದೆ 500 ಟನ್ ಶ್ರೀಗಂಧವನ್ನು ಗ್ಲೋಬಲ್ ಟೆಂಡರ್ ಮುಖಾಂತರ ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಲಾಗುವುದು.

ಇ) ಖಾಸಗಿ ಕ್ಷೇತ್ರದಲ್ಲಿ ಶ್ರೀಗಂಧದ ಮರಗಳನ್ನು ಬೆಳೆಸಲು ಯಾವ ಅಭ್ಯಂತರವೂ ಇರುವುದಿಲ್ಲ. ರಾಜ್ಯದ ಎಲ್ಲೆಡೆಯಲ್ಲೂ ಬೆಳೆಸಬಹುದು.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಳ್ಳಸಾಗಾಣಿಕೆದಾರರಿಂದ ಅರಣ್ಯ ಇಲಾಖೆಯು ವಶಪಡಿಸಿಕೊಂಡ ಶ್ರೀಗಂಧದ ಮರಗಳ ಒಟ್ಟು ಮೊತ್ತ ಎಷ್ಟು ಎಂದು ಕೇಳಿದ್ದೇನೆ. ಅದಕ್ಕೆ ಸುಮಾರು 1033.463 ಟನ್‌ಗಳು ಎಂದು ಹೇಳಿ ಇದರ ಅಂದಾಜು ಮೊತ್ತ ಹದಿನೆಂಟು ಕೋಟಿ ರೂಪಾಯಿಗಳು ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ಅರಣ್ಯ ಇಲಾಖೆಯ ವಶದಲ್ಲಿ ಒಟ್ಟು ಎಷ್ಟು ಟನ್ ಗಂಧದ ಮರಗಳ ಸ್ಟಾಕ್ ಇದೆ.? ಇದನ್ನು ಮಾರಾಟ ಮಾಡತಕ್ಕಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರಕಾರಿ ಶ್ರೀಗಂಧದ ಎಣ್ಣೆ ಕಾರ್ಖಾನೆಗಳಿಗೆ ಮತ್ತು ಕುಶಲಕರ್ಮಿಗಳಿಗೆ ಹಾಗೂ ದೇವಸ್ಥಾನಗಳಿಗೆ ಸರಬರಾಜು ಮಾಡಲಾಗುತ್ತಿದೆಯೆಂದು ತಿಳಿಸಿದ್ದಾರೆ. ಅದೂ ಅಲ್ಲದೆ ಮಾರಾಟ ಮಾಡತಕ್ಕಂಥ ವಿಚಾರದಲ್ಲಿ ಹೇಳುತ್ತಾ ಗ್ಲೋಬಲ್ ಟೆಂಡರ್ ಮೂಲಕ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಹೀಗೆ ಮಾರಾಟ ಮಾಡುವಂಥ ಸಂದರ್ಭದಲ್ಲಿ ಏನೇನು ನಿಯಮಗಳನ್ನು ಅನುಸರಿಸುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು. 1033 ಟನ್ ಗಂಧವು ಕಳ್ಳಸಾಗಾಣಿಕೆಯಲ್ಲಿ ಸಿಕ್ಕಬೇಕಾದರೆ ಇದರ ಪ್ರಮಾಣ ಏನಿರಬಹುದು. ಇದೇ ಸದನದಲ್ಲಿ ಹಿಂದಿನ ಅರಣ್ಯ ಸಚಿವರಾದಂಥ ಬಸವಲಿಂಗಪ್ಪನವರು ಅರಣ್ಯವನ್ನು ಲೂಟಿ ಮಾಡತಕ್ಕಂಥ ವೀರಪ್ಪನನ್ನು ಹಿಡಿಯುತ್ತೇವೆ ಎಂದು ಕೂಡ ಹೇಳಿದ್ದರು. ಆದು ಏನಾಗಿದೆ? ಅವನನ್ನು ಹಿಡಿದಿದ್ದಾರೋ ಹೇಗೆ? ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಇ. ಟಿ. ಶಂಭುನಾಥ್: ಸರಕಾರದ ವಶದಲ್ಲಿರತಕ್ಕಂಥ ಗಂಧದ ಮರದ ಒಟ್ಟು ಮೊತ್ತ 3800ಟನ್. 500ಟನ್‌ಗಳಷ್ಟು ಗ್ಲೋಬಲ್ ಟೆಂಡರ್ ಹಾಕಬೇಕೆಂದೂ, 400ಟನ್‌ಗಳಷ್ಟು ಗಂಧದ ಎಣ್ಣೆಯ ಕಾರ್ಖಾನೆಗಳಿಗೆ ಒದಗಿಸಿಕೊಡಬೇಕೆಂದೂ ಹಾಗೂ ಉಳಿದುದನ್ನು ಕುಶಲಕರ್ಮಿಗಳಿಗೆ ಮತ್ತು ದೇವಾಸ್ಥಾನಗಳಿಗೆ ಒದಗಿಸಿಕೊಡಬೇಕೆಂದೂ ಇದೆ. ಆದೂ ಅಲ್ಲದೆ ಅವರು ಹೇಳಿದೆ ಪ್ರಕಾರ ವೀರಪ್ಪನ್‌ನನ್ನು ಹಿಡಿಯುವ ವಿಚಾರದಲ್ಲಿ ಒಂದು ಮಾತು ಹೇಳಬಯಸುತ್ತೇನೆ. ಅವನನ್ನು ಹಿಡಿಯುವುದಕ್ಕೆ ಸರಕಾರದ ವತಿಯಿಂದ ಎಲ್ಲಾ ಪ್ರಯತ್ನಗಳು ನಡೆಯುತ್ತಿದೆ. ಆದರೆ ನಾವು ಅವನನ್ನು ಇಂಥ ಸಮಯದಲ್ಲಿ ಹಿಡಿಯುತ್ತೇವೆ ಎಂದು ಬಹಿರಂಗ ಮಾಡಿದರೆ ಆತ ತಪ್ಪಿಸಿಕೊಳ್ಳಲು ಯತ್ನಿಸುವ ಸಂದರ್ಭಗಳು ಇರುತ್ತವೆ. ಆ ಕಾರಣಕ್ಕಾಗಿ ಹೆಚ್ಚಿನ ವಿವರಗಳನ್ನು ಹೇಳುವುದು ಉಚಿತವಾಗಲಾರದು ಎಂದು ಭಾವಿಸುತ್ತೇನೆ. ಹೀಗೆ ಮಾಡುವುದರಿಂದ ಅವರಿಗೆ ನಾವು ದಾರಿ ಮಾಡಿಕೊಟ್ಟಹಾಗೆ ಆಗುತ್ತದೆ.

MR. SPEAKER: That is the correct strategy

ಶ್ರೀ ಸಿ. ಬೈರೇಗೌಡ: ಇದು ವೀರಪ್ಪನ್ ತಪ್ಪಿಸಿಕೊಳ್ಳುವ ಸ್ಟ್ರಾಟಜಿಯೋ ಅಥವಾ ಮಂತ್ರಿಗಳು ತಪ್ಪಿಸಿಕೊಳ್ಳುವ ಸ್ಟ್ರಾಟಜಿಯೋ?

ಶ್ರೀ ಬಿ. ಬಸವಲಿಂಗಪ್ಪ: ಇತ್ತೀಚೆಗೆ ಗಂಧದ ಕಳ್ಳಸಾಗಾಣಿಕೆಯು ಒಂದು ಕಸಬಾಗಿ ಹೋಗಿ ಬಿಟ್ಟಿದೆ. ಸುಮಾರು 4500 ಟನ್‌ಗಳು ನಮ್ಮಲಿ ಇದ್ದಾವೆ. 500ಟನ್‌ಗಳಷ್ಟನ್ನು ಈಗ ಬಹಿರಂಗವಾಗಿ ಹರಾಜು ಹಾಕಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ್ದೇವೆ. ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ. ತಮಿಳುನಾಡಿನಲ್ಲಿ ಇದೇ ರೀತಿಯಲ್ಲಿ ಹರಾಜು ಮಾಡಿಕೊಂಡು ಬಂದಿದ್ದಾರೆ. ಇರತಕ್ಕಂಥ ನಿಯಮಗಳನ್ನು ಪದ್ಧತಿಗಳನ್ನು ನಾವು ಗಮನನಲ್ಲಿಟ್ಟುಕೊಂಡು ಅಡ್ವರ್ಟೈಸ್ ಮಾಡುತ್ತಾ ಇದ್ದೇವೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದಕ್ಕೆ ತುಂಬಾ ಬೇಡಿಕೆಯೂ ಇದೆ. ಇದರ ಬಗ್ಗೆ ನಾವು ಇನ್ನೂ ಸಂಶೋಧನೆ ಮಾಡಬೇಕಾಗುತ್ತದೆ. ಅಲ್ಲಿ ಸಿಂಥೆಟಿಕ್ ಆಯಿಲ್ ತಯಾರು ಮಾಡುತ್ತಾ ಇದ್ದಾರೆ ಅಲ್ಲಿನ ಬೇಡಿಕೆ ಇಲ್ಲದೇ ಹೋದರೆ ನಾವು ಸಪ್ಲೈ ಮಾಡುವುದಕ್ಕಾಗುವುದಿಲ್ಲ ಆದುದರಿಂದ ನಾವು ಫಾರೆಸ್ಟ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಶನ್‌ನ ಎಂ. ಡಿ. ಅವರಿಗೆ ನಿರ್ದೇಶನವನ್ನು ಈ ದಿಸೆಯಲ್ಲಿ ಕೊಟ್ಟಿದ್ದೇವೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ಆಗುತ್ತದೋ ಇಲ್ಲವೋ ಎಂದು ತನಿಖೆ ಮಾಡಿ ಮುಂದಿನ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಸುಮಾರು 4000ಟನ್‌ಗಳಷ್ಟು ನಮ್ಮಲಿ ಇದ್ದು ಇದನ್ನು ಇಟ್ಟುಕೊಳ್ಳುವುದೇ ಒಂದು ಕಷ್ಟದ ಕೆಲಸವಾಗಿದೆ. ಇದರ ಜೊತೆಗೆ ಸ್ಮಗ್‌ಲಿಂಗ್ ಮಾಡುತ್ತಿರುವವರ ಬಗ್ಗೆ ಒಂದು ಪ್ರಶ್ನೆಯನ್ನು ತಾವುಗಳು ಕೇಳಿದ್ದೀರಿ. ನಾನು ಅಸೆಂಬ್ಲಿಯಲ್ಲಿ ಇಂಥಿಂಥವರು ಸ್ಮಗ್ಲರ್‌ಗಳ ಮಧ್ಯವರ್ತಿಗಳು ಇದ್ದಾರೆ, ಬೆಂಗಳೂರಿನಲ್ಲಿ ಇದ್ದಾರೆ, ಮೈಸೂರಲ್ಲಿ ಇದ್ದಾರೆ ಎಂದು ಹೇಳಿದ್ದೇನೆ. ಅವರನ್ನು ಹಿಡಿಯುವುದಕ್ಕೆ ಎಲ್ಲಾ ಪ್ರಯತ್ನಗಳೂ ನಡೆಯುತ್ತಿವೆ. ಫಾರೆಸ್ಟ್ ಇಲಾಖೆಗೆ ಈ ವಿಚಾರದಲ್ಲಿ ಪೋಲೀಸ್ ಇಲಾಖೆಯ ಪೂರ್ಣ ಸಹಕಾರ ಅಗತ್ಯವಾಗಿದೆ. ಡಿಐಜಿ ಫಾರೆಸ್ಟ್ ಎಂದು ಒಬ್ಬರು ಇದ್ದಾರೆ. ಅವರ ಮುಖವನ್ನೇ ನಾನು ನೋಡಿಲ್ಲ ಅವರ ಪತ್ತೆಯೇ ಇಲ್ಲ. ಆದರೆ ಈ ಸ್ಮಗ್ಲಿಂಗ್ ಮಾಡುವವರಿಗೆ ಒಬ್ಬ ಮಧ್ಯಸ್ತಿಗೆಗಾರ ಇರಲೇ ಬೇಕು. ಅಂಥವರನ್ನು ಪತ್ತೆ ಮಾಡಿ ಅವರನ್ನು ನಾವು ಜೈಲಿಗೆ ಹಾಕದೇ ಹೋದರೆ, ಅವರ ವಿರುದ್ಧ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ, ಈ ಸ್ಮಗ್ಲಿಂಗ್ ಆಕ್ಟಿವಿಟೀಸ್ ಕಡಿಮೆಯಾಗುವುದಿಲ್ಲ. ಇವರ ಜೊತೆಗೆ ಇನ್ನೂ ಕೆಲವು ಖದೀಮರು ಇದ್ದಾರೆ. ಅವರ ಬಗ್ಗೆ ತೀವ್ರವಾದ ಆಲೋಚನೆ ಮಾಡಿ ಕ್ರಮ ತೆಗೆದುಕೊಳ್ಳವ ಬಗ್ಗೆ ಸರಕಾರ ಆಲೋಚನೆ ಮಾಡುತ್ತಿದೆ ಎಂದು ಈ ಸದನದ ಮೂಲಕ ತಿಳಿಸಬಯಸುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಶ್ರೀಗಂಧವನ್ನು ಕಳ್ಳತನ ಮಾಡತಕ್ಕವರನ್ನು ಹಿಡಿಯಬೇಕು. ಹಿಡಿಯುತ್ತೇವೆ ಎಂಬ ಪಾದವನ್ನು ಹೇಳುತ್ತಿದ್ದಾರೆ. ಡಿಐಜಿ ಅವರನ್ನು ನೋಡಿಲ್ಲ ಎಂದು ಒಂದು ಹೇಳಿಕೆ ಕೊಟ್ಟಿದ್ದಾರೆ. ಸರ್ಕಾರದ ಅಧಿಪತ್ಯವನ್ನು ವಹಿಸಿಕೊಂಡಿರತಕ್ಕ ಇವರೇ ಹೀಗೆ ಹೇಳಿದರೆ ನಾವು ಯಾರನ್ನು ಭೇಟಿ ಮಾಡುವುದು? ಯಾರನ್ನು ಹಿಡಿಯಬೇಕು ಎಂದು ದಯವಿಟ್ಟು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ: ಅವರು ಪೋಲೀಸರ ವಶದಲ್ಲಿದ್ದಾರೆ. ಅದಕ್ಕೋಸ್ಕರ ಬರಲಿಲ್ಲ. ನಮ್ಮ ವಶಕ್ಕೆ ಅವರನ್ನು ತೆಗೆದುಕೊಂಡು ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ : ಗಂಧವನ್ನು ಮರದ ರೂಪದಲ್ಲಿ ಮಾರಾಟ ಮಾಡುವುದು ಲಾಭವೇ ಅಥವಾ ಎಣ್ಣೆ ಮಾಡಿ ಎಣ್ಣೆಯ ರೂಪದಲ್ಲಿ ಮಾರಾಟ ಮಾಡುವುದು ಲಾಭವೇ? ಆದರೆ ನಮ್ಮಲ್ಲಿ ಇಂತಹ ಎರಡು ಗಂಧದೆಣ್ಣೆ ಕಾರ್ಖಾನೆಗಳು ಇವೆ. ಒಂದು ಮೈಸೂರಿನಲ್ಲಿ ಹಾಗೂ ಮತ್ತೊಂದು ಶಿವಮೊಗ್ಗದಲ್ಲಿ. ಅದರ ಉತ್ಪಾದನಾ ಸಾಮಾರ್ಥ್ಯವನ್ನು ಹೆಚ್ಚಿಸಿ ಈಗ 4 ಸಾವಿರ ಟನ್ ಇದೆ ಎಂದು ಏನು ಹೇಳಿದ್ದೀರಿ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಪಡುತ್ತದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ: ಸರ್ಕಾರ ಇದರ ಬಗ್ಗೆ ತೀವ್ರತೆಯಿಂದ ಯೋಚನೆ ಮಾಡಿದೆ. ಎರಡು ಗಂಧದ ಕಾರ್ಖಾನೆಗಳು ಇವೆ, ನಿಂತು ಹೋಗಿ ಬಿಟ್ಟಿದೆ.

ಶ್ರೀ ಸಿ ಬೈರೇಗೌಡ: ಅದನ್ನು ಮಾಡರ್ನೈಸ್ ಮಾಡಿ ಎಂದು ಹೇಳುತ್ತಿರುವುದು.

ಶ್ರೀ ಬಿ. ಬಸವಲಿಂಗಪ್ಪ: ಅಲ್ಲಿ ಉತ್ಪತ್ತಿ ಆಗತಕ್ಕೆ ಎಣ್ಣೆಯು ನಮ್ಮ ಸೋಪ್ ಫ್ಯಾಕ್ಟರಿಗಳಿಗೆ ಬೇಕಾಗಿರತಕ್ಕದ್ದು. ಸೋಪ್ ಫ್ಯಾಕ್ಟರೀಸ್‌ಗೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ನಿಂದ ಏನು ಸಪ್ಲೈ ಮಾಡಿದ್ದಾರೆ ಅದರ ಬಾಬ್ತು ಸುಮಾರು ಮೂರು ಕೋಟಿ ರೂಪಾಯಿಯನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಕೊಡಬೇಕು, ಕೊಟ್ಟಿಲ್ಲ. ಅವರು ಏನು ಹೇಳುತ್ತಾರೆ, ಮೂರು ಕೋಟಿ ರೂಪಾಯಿಯನ್ನು ಸ್ಥಗಿತವಾಗಿಟ್ಟುಬಿಡಿ, ಮುಂದಿನದೆಲ್ಲಾ ಹಣ ಕೊಡಿ, ನಾವು ಖರೀದಿ ಮಾಡಿಕೊಳ್ಳುತ್ತೇವೆ, ಅದನ್ನು ಲಿಸ್ಟ್ ಮಾಡುತ್ತೇವೆ ಎಂದು ಸೋಪ್ ಫ್ಯಾಕ್ಟರಿಯವರು ಹೇಳಿದರು. ಸೋಪ್ ಫ್ಯಾಕ್ಟರಿ ಇವೊತ್ತಿನ ದಿವಸ ಯಾವ ಪರಿಸ್ಥಿತಿಯಲ್ಲಿ ಇದೆ ಎನ್ನುವುದು ತಮಗೆ ಗೊತ್ತಿದೆ. ಸೋಪ್ ಫ್ಯಾಕ್ಟರಿಗೆ ಬೇಕಾಗಿರುವುದು ಎಷ್ಟು ಎಣ್ಣೆ ಅಷ್ಟು ಈ ಫ್ಯಾಕ್ಟರಿಯಲ್ಲಿ ತಯಾರು ಆಗುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅವರಿಗೆ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಳ್ಳುತ್ತಿದ್ದೇವೆ. ಎಣ್ಣೆಯನ್ನು ತಯಾರು ಮಾಡಿ ಇಂಟರ್‌ನ್ಯಾಶನಲ್ ಮಾರ್ಕೆಟ್‌ನಲ್ಲಿ ಅಥವಾ ಬೇರೆ ಕಡೆ ಮಾರುಕಟ್ಟೆಯಲ್ಲಿ ಮಾರಬೇಕು ಎನ್ನತಕ್ಕ ಪ್ರಶ್ನೆ ನಿಮ್ಮದು. ಅದರಿಂದ ಅಷ್ಟು ಲಾಭದಾಯಕ ಆಗಿದೆ ಅಥವಾ ಇಲ್ಲ ಎನ್ನತಕ್ಕದ್ದರ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ. ನನಗೆ ಏನು ಪ್ರಯೋಜನ ಆಗುತ್ತದೆ ಎಂಬ ಅನುಮಾನ.

ಶ್ರೀ ಚೌಡರೆಡ್ಡಿ: ಮಾನ್ಯ ಸಭಾಧ್ಯಕ್ಷರೇ, ನನ್ನ ತೋಟದಲ್ಲಿ ಮೂರು ತಿಂಗಳ ಹಿಂದೆ ಮೂರು ಗಂಧದ ಮರವನ್ನು ಒಡೆದರು. ಎರಡನ್ನು ಎತ್ತಿಕೊಂಡು ಹೋಗಿದ್ದು, ಒಂದು ಅಲ್ಲಿಯೇ ಬಿದ್ದಿದೆ. ನಾನು ಕಂಪ್ಲೇಂಟ್ ಕೊಟ್ಟಮೇಲೆ ಪೋಲೀಸರು ತೆಗೆದುಕೊಂಡು ಹೋದರು. ಪೋಲೀಸರು ತೆಗೆದುಕೊಂಡು ಹೋದ ಮೇಲೆ ಅದನ್ನು ಯಾರಿಗೆ ಕಳಿಸಿದ್ದಾರೆ, ಎಲ್ಲಿ ಇಟ್ಟಿದ್ದಾರೆ ಎಂದು ಇದುವರೆಗೆ ಗೊತ್ತಾಗಲಿಲ್ಲ. ಕಂಪ್ಲೇಂಟ್ ಮಾಡಿದ್ದರೂ ಕೂಡ ಗೊತ್ತಾಗಲಿಲ್ಲ. ಅದನ್ನು ಹೇಳುವುದಕ್ಕಾಗುತ್ತದೆಯೇ?

ಶ್ರೀ ಡಿ. ಬಿ. ಚಂದ್ರೇಗೌಡ : ವೀರಪ್ಪನನ್ನು ಕೇಳಿ ಎನ್ನುತ್ತಾರೆ.

ಅಧ್ಯಕ್ಷರು: ಮಿಸ್ ಗೈಡ್ ಆಗುವುದು ಬೇಡ.

ಶ್ರೀ ಚೌಡರೆಡ್ಡಿ: ನಮ್ಮ ಖರಿಯಾದಲ್ಲಿ ಅಲ್ಲಲ್ಲಿ ಸ್ವಲ್ಪ ಸ್ವಲ್ಪ ಗಂಧದ ಮರಗಳು ಇದೆ. ಅದನ್ನು ಒಡೆದರೆ, ಪೋಲೀಸರ ವಶಕ್ಕೆ ಕೊಟ್ಟರೂ ಎಲ್ಲಿ ಹೋಗುತ್ತದೆ. ಏನು ಎಂದು ಹೇಳುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು: ಅದನ್ನು ಹೊಡೆದರೆ ಎಂದರೆ ಏನು ಸಮಾಚಾರ?

ಶ್ರೀ ಚೌಡರೆಡ್ಡಿ: ಕಳ್ಳತನವಾದ ಕೆಲವನ್ನು ತೆಗೆದುಕೊಂಡು ಹೋಗಿದ್ದಾರೆ. ಕೆಲವನ್ನು ಬಿಟ್ಟು ಹೋಗಿದ್ದಾರೆ. ನಾವು ಕಂಪ್ಲೇಂಟ್ ಕೊಟ್ಟ ಮೇಲೆ ಪೋಲೀಸರು ತೆಗೆದುಕೊಂಡು ಪೋಲೀಸ್ ಸ್ಟೇಷನ್‌ಗೆ ಹೋದರು. ಅದು ಎಲ್ಲಿ ಹೋಯಿತು ಎಂದು ಇದುವರೆಗೆ ನಮಗೆ ಗೊತ್ತಾಗಲಿಲ್ಲ. ಕಳ್ಳತನ ಮಾಡಿದವನು ಎಲ್ಲಿ ಹೋಗುತ್ತಾನೆ?

ಶ್ರೀ ಬಿ. ಬಸವಲಿಂಗಪ್ಪ:– ನಿರ್ದಿಷ್ಟವಾದ ಪ್ರಶ್ನೆಗಳನ್ನು ಕೇಳಿದರೆ ಮಾತ್ರ ಉತ್ತರ ಕೊಡಬಹುದು.

ಶ್ರೀ ಹೆಚ್. ಏಕಾಂತಯ್ಯ :– ಈಗ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಗಂಧದ ಕಟ್ಟಿಗೆ ಏನು ಇದೆ ಇದನ್ನು ಸಾರ್ವಜನಿಕವಾಗಿ ಹರಾಜು ಮಾಡಬಹುದು ಎಂದು ಗ್ಲೋಬಲ್ ಟೆಂಡರ್ ಮುಖಾಂತರ ಹರಾಜು ಮಾಡುತ್ತೇವೆ ಎಂಬ ಮಾತನ್ನು ಹೇಳಿದರು. ಗಂಧದ ಎಣ್ಣೆ ಕಾರ್ಖಾನೆ ಏನು ಇದೆ ಈ ಕಾರ್ಖಾನೆಯಲ್ಲಿ ತಾವು ಎಣ್ಣೆಯನ್ನು ಮಾಡಿ ಸೋಪ್ ಫ್ಯಾಕ್ಟರೀಸ್‌ಗೆ ಕೊಡುತ್ತೇವೆ ಎಂಬ ಮಾತು ಹೇಳಿದ್ದಾರೆ. ಹೊಸ ನೀತಿಯನ್ನು ಸರ್ಕಾರ ಈಗ ಅನುಸರಿಸುತ್ತಿದೆ. ಈ ನೀತಿ ಕಳ್ಳ ದಂಧೆಯನ್ನು ಮಾಡುವವರೆಗೆ ಸಹಾಯ ಆಗುತ್ತದೋ ಅಥವಾ ಇಲ್ಲವೋ? ಇವೊತ್ತಿನ ದಿವಸ ಸಾರ್ವಜನಿಕವಾಗಿ ಹರಾಜು ಮಾಡಿ ಪರ್ಮಿಟ್ ಕೊಡುತ್ತಾರೆ. ಇಂತಹ ಪರ್ಮಿಟ್ಟನ್ನು ತೆಗೆದುಕೊಂಡು ಹೋಗಿ ಬೇರೆಯವರಿಗೆ ಮಾರಾಟ ಮಾಡುವ ನೆಪದಲ್ಲಿ ಇಂತಹ ಒಂದು ಪರ್ಮಿಟ್‌ಗೆ ಹತ್ತು ಸಾರಿ ಹೊಡೆಯುವಂತಹ ಒಂದು ಕಳ್ಳ ಸಾಗಾಣಿಕೆ ಮಾಡುವ ಸಂಶಯ ಇದೆ. ಆದ್ದರಿಂದ ಈ ಒಂದು ನೀತಿ ಕಳ್ಳ ಸಾಗಾಣಿಕೆ ಮಾಡುವ ಜನರ ಪರವಾಗಿ ಇದೆಯೇ ಹೊರತು ಇದು ಸರ್ಕಾರದ ಹಿತಕ್ಕೆ ಅನುಕೂಲ ಆಗಿದೆಯೇ?

ಶ್ರೀ ಬಿ. ಬಸವಲಿಂಗಪ್ಪ: ಹಿಂದೆ ಎಂದೂ ಮಾರಾಟ ಮಾಡಿರಲಿಲ್ಲ. ಅನುಭವದಲ್ಲಿ ತಾವು ಹೇಳಿರತಕ್ಕ ಸಲಹೆಯನ್ನು ಪರಿಶೀಲನೆ ಮಾಡಿದ್ದೇವೆ. ಅದನ್ನು ಮನಸಿನಲ್ಲಿ ಇಟ್ಟುಕೊಂಡು ಅದನ್ನು ಯಾವ ರೀತಿಯಿಂದ ತಡೆ ಹಾಕಬೇಕು, ಪ್ರತಿಬಂಧಕ ಮಾಡಬೇಕು. ಎನ್ನುವುದರ ಬಗ್ಗೆ ಯೋಚನೆ ಮಾಡಿ ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ: ಅರಣ್ಯ ಸಚಿವರು ಹೇಳಿದರು, ಐದು ನೂರು ಟನ್ ಗ್ಲೋಬಲ್ ಟೆಂಡರ್ ಮುಖಾಂತರ ನಾವು ಹರಾಜು ಮಾಡಿ ಮಾರಾಟ ಮಾಡುತ್ತೇವೆ ಎಂದು ಮತ್ತು ಗವರ್ನಮೆಂಟ್ ಫ್ಯಾಕ್ಟರೀಸ್‌ಗಳು ಏನು ಇವೆ, ಅದಕ್ಕೆ ನಾಲ್ಕು ನೂರು ಟನ್ ಕೊಡುತ್ತೇವೆ ಎಂದು ಈಗ ಈ ನಾಲ್ಕು ನೂರು ಟನ್ ನೀವು ಏನು ಸಪ್ಲೈ ಮಾಡುತ್ತೀರಿ ಅದರಿಂದ ಸರ್ಕಾರಕ್ಕೆ ಸಾಕಷ್ಟು ಹಾನಿ ಆಗುತ್ತದೆ ಅದು ನಿಮ್ಮ ಗಮನಕ್ಕೆ ಬಂದಿದೆಯೆ? ಏಕೆಂದರೆ ಇದರ ಮಾರ್ಕೆಟ್ ರೇಟ್ ತುಂಬಾ ಜಾಸ್ತಿ ಇದೆ. ಗ್ಲೋಬಲ್ ಟೆಂಡರ್ ಮುಖಾಂತರ ತಾವುಗಳು ಮಾರಾಟ ಮಾಡುವ ವ್ಯವಸ್ಥೆ ಮಾಡಿದರೆ ಹೇಗೆ? ಈ ಹಿಂದೆ ನಮ್ಮ ಸರಕಾರದವರು ಹಾಗೆ ಮಾಡಿಲ್ಲ. ಅಂತೆಯೇ ಯಾವಾಗಲೂ ಇಂಥ ಒಂದು ವ್ಯವಸ್ಥೆ ಆಗಿಲ್ಲ. ಆಂಧ್ರಪ್ರದೇಶದಲ್ಲಿ ಮಾರಾಟ ಮಾಡುತ್ತಾರೆ. ನಮ್ಮ ಸರಕಾರ ಇದ್ದಾಗ ಈ ವಿಷಯ ಬಂದಾಗ ನಾವು ಹಾಗೆ ಮಾರಾಟ ಮಾಡಬಾರದು ಎಂದು ಮಾಡಿದ್ದೇವೆ. ಹೀಗೆ ಮಾರಾಟ ಮಾಡುವುದರಿಂದ ಸ್ಮಗ್ಲಿಂಗ್ ಹೆಚ್ಚು ಆಗಬಹುದು ಎಂದು ಹೇಳಿದ್ದಾರೆ. ಸರಕಾರಿ ಫ್ಯಾಕ್ಟರಿಗಳಿಗೆ ಸಪ್ಲೈ ಮಾಡಿದರೆ ನಷ್ಟ ಆಗುತ್ತದೆ ಎಂಬ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಶ್ರೀ ಇ. ಟಿ. ಶಂಭುನಾಥ್ :– ನಮ್ಮ ಸರಕಾರಿ ಗಂಧದ ಎಣ್ಣೆ ಕಾರ್ಖಾನೆಗಳು ಜೀವಂತ ಆಗಿರಬೇಕು ಎಂಬ ಕಾರಣಕ್ಕಾಗಿ ಅವರಿಗೆ 50 ಪರ್‌ಸೆಂಟ್ ರೇಟ್‌ನಲ್ಲಿ ನಾವು ಮಾರಾಟ ಮಾಡುತ್ತಾ ಇದ್ದೇವೆ. ಸರಕಾರಕ್ಕೆ ಕೇವಲ ಲಾಭ ಆಗತಕ್ಕಂಥಾದ್ದು ಮುಖ್ಯವಾದಂಥ ಪ್ರಶ್ನೆ ಅಲ್ಲ ಅವುಗಳು ಚೆನ್ನಾಗಿ ನಡೆಯ ಬೇಕೆನ್ನುವ ದೃಷ್ಟಿಯಿಂದ ಸಪ್ಲೈ ಮಾಡುತ್ತಿದ್ದೇವೆ. ಇನ್ನು ಗ್ಲೋಬಲ್ ಟೆಂಡರ್ ಕರೆಯುವ ವಿಚಾರ. ತಮಿಳುನಾಡಿನಲ್ಲಿ ಅವರು ಕಾನೂನು ಪ್ರಕಾರ ಹೇಗೆ ಮಾಡುತ್ತಾರೋ ಹಾಗೆ ನಾವು ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಆದ್ದರಿಂದ ಕಳ್ಳಸಾಗಾಣಿಕೆ ಹೆಚ್ಚಿಗೆ ಆಗುವುದಿಲ್ಲ. ಅದರಿಂದ

ದೇಶದ ಮತ್ತು ರಾಜ್ಯದ ಉತ್ಪನ್ನ ಹೆಚ್ಚಿಗೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಶ್ರೀಗಂಧದ ನಾಡು ಆದಂತಹ ಕರ್ನಾಟಕದಲ್ಲಿ ಗಂಧದ ಮರಗಳು ಹೆಚ್ಚಿಗೆ ಬೆಳೆಯತಕ್ಕಂಥದ್ದು ಇದೆ. ಆದರೆ ನಮ್ಮ ರಾಜ್ಯದಲ್ಲಿನ ಸರ್ಕಾರ ಗಂಧದ ಎಣ್ಣೆಯ ಕಾರ್ಖಾನೆಗಳು ನಷ್ಟದಲ್ಲಿ ಕೆಲಸ ಮಾಡುತ್ತಿವೆ. ನಮ್ಮ ರಾಷ್ಟ್ರದ ಉತ್ತರ ಪ್ರದೇಶದಲ್ಲಿ ಗಂಧದ ಮರಗಳು ಬೆಳೆಯುವುದಿಲ್ಲ. ಆದರೆ ಅಲ್ಲಿಯ ಅಮೇಥಿಯಲ್ಲಿ ಇರುವ ಗಂಧದ ಎಣ್ಣೆ ಕಾರ್ಖಾನೆಗಳು ಪ್ರಬುದ್ಧವಾಗಿ, ಚೆನ್ನಾಗಿ, ಸುವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿವೆ. ಅಂದಮೇಲೆ ನಮ್ಮಲ್ಲಿ ಕಾರ್ಖಾನೆಗಳು ನಷ್ಟದಲ್ಲಿ ನಡೆಯಲು ಕಾರಣ ಏನು? ಕರ್ನಾಟಕದಿಂದ ಹೊರಗಡೆ ಹೋಗುವ ಗಂಧದ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ಪರಿಣಾಮಕಾರಿಯಾದ ಯಾವುದಾದರೂ ಕಾನೂನು ತಯಾರು ಮಾಡಿ ಪ್ರತಿಬಂಧಿಸುತ್ತೀರಾ? ಅಂಥ ತಿದ್ದುಪಡಿಯನ್ನು ತರುವುದಕ್ಕೆ ಯೋಚನೆ ಮಾಡಿದ್ದೀರಾ? ಅಂತೆಯೇ ಕುಖ್ಯಾತ ವೀರಪ್ಪನ್‌ನನ್ನು ಹಿಡಿಯಲು ಇಂದು, ನಾಳೆ ಎಂದು ಹೇಳುತ್ತಿದ್ದೀರಿ, ಅದರ ಬಗ್ಗೆ ಏನಾದರೂ ತಿಳಿಸಿದರೆ ನಮಗೂ ಸ್ವಲ್ಪ ಸಂತೋಷವಾಗುತ್ತದೆ ಈ ಬಗ್ಗೆ ತಿಳಿಸುವಿರಾ?

ಶ್ರೀ ಇ. ಟಿ. ಶಂಭುನಾಥ್ :– ರಾಜ್ಯದಲ್ಲಿನ ಗಂಧದ ಎಣ್ಣೆಯ ಕಾರ್ಖಾನೆಗಳು ಅರಣ್ಯ ಇಲಾಖೆಯ ವಶದಲ್ಲಿ ಇಲ್ಲ. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನ ವಶದಲ್ಲಿ ಇದೆ. ಅವುಗಳನ್ನು ಲಾಭದಾಯಕವಾಗಿ ನಡೆಸುವುದಕ್ಕೆ ಸರಕಾರದವರು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಮಾನ್ಯ ಸದಸ್ಯರು ಹೇಳಿದ ಎಲ್ಲಾ ಸಲಹೆಗಳನ್ನು ಸ್ವಾಗತ ಮಾಡುತ್ತೇನೆ.

ಪ್ರೊ: ಎಂ. ಡಿ. ನಂಜುಂಡ ಸ್ವಾಮಿ :– ಸ್ವಲ್ಪ ಹೊತ್ತಿನ ಕೆಳಗೆ ಮಾನ್ಯ ಚೌಡರೆಡ್ಡಿಯವರು ತಮ್ಮ ತೋಟದಲ್ಲಿ ಬೆಳೆದಂಥ ಶ್ರೀಗಂಧದ ಗಿಡಗಳನ್ನು ಪೋಲೀಸರಿಗೆ ಒಪ್ಪಿಸಿದ್ದೇನೆ ಎಂದು ಹೇಳಿದರು ಇಲ್ಲಿ ಒಂದು ಸ್ಪಷ್ಟೀಕರಣ ಬೇಕು. ನಾನು ನನ್ನ ಹೊಲದಲ್ಲಿ ಶ್ರೀಗಂಧದ ಮರಗಳನ್ನು ಬೆಳೆದರೆ ಅದು ಇನ್ನೂ ಸರಕಾರದ ಸ್ವತ್ತು ಎನ್ನುವ ಕಾನೂನನ್ನು ಇಟ್ಟುಕೊಂಡಿದ್ದೀರಾ? ನಮ್ಮ ಸಾರ್ವಜನಿಕ ಉದ್ದಿಮೆಗಳು ಉದ್ದೇಶಪೂರ್ವಕವಾಗಿ ಖಾಯಿಲೆ ಬೀಳುತ್ತಾ ಇವೆ ಎಂಬ ಆರೋಪ ಇದೆ. ಇದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ:– ಖಾಸಗೀಯವರು ಗಂಧದ ಮರಗಳನ್ನು ಅವರಾಗಿಯೇ ಕೊಟ್ಟರೆ ನಾವು ಸುಮಾರು ಶೇಕಡಾ 70ರಷ್ಟು ಬೆಲೆಯನ್ನು ಕೊಟ್ಟು ತೆಗೆದುಕೊಳ್ಳುವುದಕ್ಕೆ ಒಂದು ಕಾನೂನನ್ನು ಮಾಡಿದ್ದೇವೆ. ಹಾಗೆಯೇ ಚೌಡರೆಡ್ಡಿಯವರು ನಮಗೆ ಕೊಟ್ಟರೆ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ :– ಕಳ್ಳಸಾಗಾಣಿಕೆಯ ಮೂಲಕ ಜಾಸ್ತಿ ಗಂಧದ ಮರಗಳು ಕೇರಳಕ್ಕೆ ಹೋಗುತ್ತಿವೆ. ಕೇರಳ ಗಡಿಯ ಉಳ್ಳಾಲ ಮತ್ತು ಉಕ್ಕಡ ಮೊದಲಾದಕಡೆಗಳಿಂದ ಹೋಗುತಕ್ಕಂಥ ಗಂಧಕ್ಕೆ ಲೆಕ್ಕವಿಲ್ಲ. ಕೇರಳದಲ್ಲಿ ಗಂಧವೇ ಇಲ್ಲ ಆದರೆ ಅಲ್ಲಿ ಗಂಧದೆಣ್ಣೆ ಕಾರ್ಖಾನೆಗಳು ಬೇಕಾದಷ್ಟು ಇವೆ. ಆದುದರಿಂದ ಗಡಿಪ್ರದೇಶಗಳ ಮೂಲಕ ಕಳ್ಳಸಾಗಾಣಿಕೆಯಾಗುವ ವಿಚಾರದಲ್ಲಿ ವಿಶೇಷವಾದಂಥ ಒಂದು ಬಂದೋಬಸ್ತನ್ನು ಮಾಡಿ ಅದನ್ನು ತಡೆಗಟ್ಟಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಶ್ರೀ ಇ.ಟಿ. ಶಂಭುನಾಥ್:– ತಮ್ಮ ಸಲಹೆಯನ್ನು ಸ್ವಾಗತ ಮಾಡುತ್ತೇನೆ ಮತ್ತು ಆ ದಿಸೆಯಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು :– ತಮ್ಮ ಪ್ರಶ್ನೆಗೆ ಚುಕ್ಕೆ ಗುರುತಿನ ಪ್ರಶ್ನೆ 107(442) ಕ್ಕೆ ಮಾನ್ಯ ಮಂತ್ರಿಗಳು ಸಮಯವನ್ನು ಕೇಳಿದ್ದಾರೆ.

ಶ್ರೀ ಎಂ. ವಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗಳನ್ನು ಕೇಳುವ ವಿಚಾರದಲ್ಲಿ ನನ್ನದೊಂದು ಭಿನ್ನಹ ನಾವು ಪ್ರಶ್ನೆಗಳನ್ನು 10 ದಿವಸಗಳ ಮೊದಲೇ ಕೊಡಬೇಕಾಗುತ್ತದೆ. ಮೊದಲು ಪರಿಷತ್‌ನಲ್ಲಿ ಯಾವಾಗಲೂ ಪ್ರಶ್ನೆಗಳನ್ನು ಕೊಡಬಹುದಾಗಿತ್ತು. ಅವರು ಆದಷ್ಟು ಜಾಗೃತೆ ಕಳುಹಿಸಿಕೊಟ್ಟು ಉತ್ತರಗಳನ್ನು ತರಿಸಿಕೊಳ್ಳುತ್ತಿದ್ದರು.

ಅಧ್ಯಕ್ಷರು:– ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ಕೊಡಲು ಸಿದ್ದರಿದ್ದಾರೆ, ಕೇಳಿ.

11–30 ಎ.ಎಂ.

ಶ್ರೀ ಎಂ. ವಿ. ವೆಂಕಟಪ್ಪ: ಆಯಿತು ಕೇಳುತ್ತೇನೆ ಕೋಲಾರ ಜಿಲ್ಲೆಯ ಹರಿಜನ ಗಿರಿಜನರಿಗೆ ಒದಗಿಸಲಾದ ಒಟ್ಟು ಹಣದಲ್ಲಿ ಬಹಳ ಹಣವನ್ನು ಖರ್ಚುಮಾಡಿಲ್ಲ ಇದಕ್ಕೆ ಜಿಲ್ಲಾಪರಿಷತ್ ಕಾರಣವೋ ಅಥವಾ ಸಂಬಂಧಪಟ್ಟ ಅಧಿಕಾರಿಗಳು ಕಾರಣವೋ ಹೇಳಿ?

ಶ್ರೀ. ಬಿ. ಬಸವಲಿಂಗಪ್ಪ:– ಅಧ್ಯಕ್ಷರೇ, ಈ ವಿಚಾರದ ಬಗ್ಗೆ ತೀವ್ರ ಗಮನಕೊಟ್ಟು ಸರ್ಕಾರ ಒಂದು ನಿರ್ಣಯ ತೆಗೆದುಕೊಂಡಿದೆ. ವಿಶೇಷ ಘಟಕ ಯೋಜನೆಯ ಹಣವನ್ನು ಜಿಲ್ಲಾಪರಿಷತ್‌ಗಳವರು ಹೇಗೆ ಖರ್ಚುಮಾಡಿದ್ದಾರೆ ಎಂಬ ಬಗ್ಗೆ ಸ್ವಲ್ಪ ಕಳವಳವನ್ನೂ ವ್ಯಕ್ತಪಡಿಸಿದ್ದೇನೆ. ಅವರು ಆಸಕ್ತಿ ವಹಿಸಿ ಕೆಲಸ ಮಾಡುವುದು ಬಹಳ ಕಮ್ಮಿ ಆದ್ದರಿಂದ ವಿಶೇಷ ಘಟಕ ಯೋಜನೆಯ ಹಣ ಮತ್ತು ಇಲಾಖೆಗಳ ಹಣವನ್ನೂ ಸೇರಿಸಿ ಒಂದು ಪೂಲ್ ಮಾಡುತ್ತೇವೆ. ಇದನ್ನು ಹೆಗಡೆಯವರ ಕಾಲದಲ್ಲೆ ಮಾಡಿದ್ದು ಆದರೆ ಕಾರ್ಯಗತವಾಗಲಿಲ್ಲ ಅಷ್ಟೆ ಅದಕ್ಕಾಗಿ ಅವರಿಗೆ ಧನ್ಯವಾದಗಳು ಅದೇ ಮೇಲ್ಪಂಕ್ತಿಯಲ್ಲಿ ನಾವೂ ತೀರ್ಮಾನ ಕೈಗೊಂಡು ಪೂಲ್ ಅಮೌಂಟನ್ನು ಯಾವ ರೂಪದಲ್ಲಿ ಎಸ್‌ಸಿ ಜನಾಂಗದವರಿಗೆ ಡಾ॥ ಅಂಬೇಡ್ಕರ್ ಸೆಂಟೆನರಿ ವರ್ಷದಲ್ಲಿ ಹೇಗೆ ಖರ್ಚು ಮಾಡಬೇಕೆಂದು ಕಾರ್ಯಕ್ರಮ ರೂಪಸಿದ್ದೇವೆ. ಇದನ್ನು ಇನ್ನು ಎರಡು ಮೂರು ದಿವಸದಲ್ಲಿ ಕಾರ್ಯಗತಮಾಡುತ್ತೇವೆ. ಆಗ ವೆಂಕಟಪ್ಪನವರ ಪ್ರಶ್ನೆಗಳಿಗೆ ಸಲೀಸಾಗಿ ಉತ್ತರ ಸಿಗುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ:– ಕೇಂದ್ರದಿಂದ ವಿಶೇಷ ಘಟಕ ಯೋಜನೆಗೆ 165 ಕೋಟಿ ರೂಪಾಯಿ ಬರುತ್ತದಂತೆ ನಿಜವೇ?

ಶ್ರೀ. ಬಿ. ಬಸವಲಿಂಗಪ್ಪ:– ಗೊತಿಲ್ಲ, ಬರುವುದಾದರೆ ಅದನ್ನೂ ಪೂಲ್ ಮಾಡಿ ಕಾರ್ಯಕ್ರಮರೂಪಿಸಿ ಖರ್ಚುಮಾಡುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ:– ಆ ಹಣದಲ್ಲಿ ಎಸ್‌ಸಿ ಎಸ್‌ಟಿಯವರಿಗೆ ಮನೆಗಳನ್ನು ಕಟ್ಟಿಸಿ ಕೊಡಿ, ಆಟ್‌ಲೀಸ್ಟ್ ತಾಲೂಕಿಗೆ ಒಂದು ಸಾವಿರ ಮನೆ.

ಶ್ರೀ ಬಿ. ಬಸವಲಿಂಗಪ್ಪ:– ಹಳ್ಳಿಗಳಲ್ಲಿ ಮನೆಗಳ ಕೊರತೆ ಇರುವುದು ನನಗೆ ಗೊತ್ತು ಇದರ ಬಗ್ಗೆ ವಿಚಾರ ಮಾಡಿದ್ದೇವೆ. ತಮ್ಮ ಸಲಹೆಯನ್ನು ಸರ್ಕಾರವೂ ಒಪ್ಪಿದೆ. ಇಂದಿರಾಯೋಜನೆ ಅಡಿಯಲ್ಲಿ ಸುಮಾರು ಒಂದು ಲಕ್ಷ ಮನೆ ಕಟ್ಟುವ ಬಗ್ಗೆ ಶೀಘ್ರದಲ್ಲೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ:– ಕೆಲವಾರು ಕಡೆ ಎಸ್‌ಸಿ ಎಸ್‌ಟಿಗಳ ಅಭಿವೃದ್ಧಿ ಹಣ ಲ್ಯಾಪ್ಸಾಗುತ್ತಿದೆ ಎಂದು ತಿಳಿಯಿತು. ಇದಕ್ಕೆ ಕಾರಣ ಜಿಲ್ಲಾಪರಿಷತ್ ಆಗಲಿ, ಪ್ರಧಾನರಾಗಲಿ, ಶಿಸ್ತಿನ ಕ್ರಮ

ತೆಗೆದುಕೊಳ್ಳುವಿರಾ?

ಶ್ರೀ ಬಿ. ಬಸವಲಿಂಗಪ್ಪ:– ನಿಮ್ಮ ಸಲಹೆ ಪ್ರಕಾರ ಕ್ರಮ ತೆಗೆದುಕೊಂಡರೆ ಲಕ್ಷಾಂತರ ಜನ ಸಿಗುತ್ತಾರೆ. ಹೋಗ್ಲಲಿ ಈಗ ನಾವು ಬೇರೆ ತೀರ್ಮಾನ ತೆಗೆದುಕೊಳ್ಳುತ್ತಿದ್ದೇವೆ ಬಿಡಿ.

ಶ್ರೀ ಬಿ. ಶಿವರಾಮ್ :– ಹಾಸನ ಜಿಲ್ಲೆಯಲ್ಲಿ ಮೇಲಿನ ಸ್ಕೀಮ್‌ನಲ್ಲಿ 1 ಕೋಟಿ 40 ಲಕ್ಷ ಕೊಟ್ಟಿದ್ದಾರೆಂದು ಗೊತ್ತಾಯಿತು. ಆ ಹಣದಿಂದ ಎಸ್‌ಸಿಎಸ್‌ಟಿಗಳ ಬಳಸುವ ಕೆರೆಗಳ ದುರಸ್ತಿ ಬಗ್ಗೆ ಗಮನಹರಿಸಿ ಕೆಲಸಮಾಡಿಸುವಿರಾ?

ಶ್ರೀ ಬಿ. ಬಸವಲಿಂಗಪ್ಪ:– ಅದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಹೇಗಿದ್ದರೂ ಜಿಲ್ಲಾ ಪರಿಷತ್ ತಿದ್ದುಪಡಿ ಕಾಯಿದೆ ಬರುತ್ತಿದೆಯಲ್ಲ! ಮಾಡೋಣ.

ಶ್ರೀ ಆರ್.ವಿ. ದೇಶಪಾಂಡೆ:– ವಿಶೇಷಘಟಕ ಯೋಜನೆಯಲ್ಲಿ ನನ್ನ ಅನುಭವದ ಪ್ರಕಾರ ಹಳ್ಳಿಗಳಲ್ಲಿ ಯಾರು ಬಲಿಷ್ಠರಿದ್ದಾರೆ ಅವರೇ ಲಾಭ ಮಾಡಿಕೊಂಡಿದ್ದಾರೆ. ಇದನ್ನು ಸ್ಟಾಪ್ ಮಾಡುವುದಕ್ಕೆ ಸಚಿವರು ಏನಾದರೂ ಪ್ರಯತ್ನ ಮಾಡುವರೇ? ಎರಡನೆಯದು ವಿಶೇಷ ಘಟಕ ಯೋಜನೆಯಲ್ಲಿ ಜನರಲ್ಲಾಗಿ ಪಾತ್ರೆಪಗಡಿಗಳನ್ನು ಹಂಚುವುದು ಬಟ್ಟೆಬರೆ ಹಂಚುವುದನ್ನು ಮಾಡುತ್ತಾರೆ. ಅದನ್ನು ಮಾಡಬಾರದು ಎಂದು ನಾನು ಹೇಳುವುದಿಲ್ಲ. ಆದರೆ ಪರ್ಮನೆಂಟ್ ಆಸೆಟ್ಸ್‌ನ್ನು ಕ್ರಿಯೇಟ್ ಮಾಡಿಕೊಟ್ಟರೆ ಲೈಫ್‌ಲಾಂಗ್ ಉಪಯೋಗ ಆಗುತ್ತದೆ. ಆ ದೃಷ್ಟಿಯಿಂದ ಮಂತ್ರಿಯವರ ಅಭಿಪ್ರಾಯವನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:– ಸಲಹೆ ಒಳ್ಳೆಯದು. ನಾವು ಅದನ್ನು ಕಾರ್ಯಗತ ಮಾಡತಕ್ಕಂಥ ಅವಶ್ಯಕತೆ ಇದೆ. ಮತ್ತೆ ಹಳ್ಳಿಯಲ್ಲಿರತಕ್ಕಂಥ ಪ್ರಭುತಿಗಳು ಏನು ಇದ್ದಾರೆ ಅವರು, ಬಹಳ ವಸೂಲಿಬಾಜಿ ಹಾಕಿಕೊಂಡು ಅಧಿಕಾರವನ್ನು ನಡೆಸುತ್ತಿದ್ದರೆ. ಇದು ಹಾಗೆಯೇ ಎಷ್ಟೋ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಬಹಳ ವರ್ಷಗಳಿಂದಲೂ ಹಾಗೇಯೇ ಬರುತ್ತಿದೆ. ಇದನ್ನು ತಡೆಗಟ್ಟಿಲ್ಲ ಇನ್ನುಮೇಲೆ ತಡೆಗಟ್ಟುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್ :– ಮಾನ್ಯ ಅಧ್ಯಕ್ಷರೇ, ನಮ್ಮ ಮಂತ್ರಿಗಳು ಯಾವಾಗ ನೋಡಿದರೂ ಕ್ರಮ ತೆಗೆದುಕೊಳ್ಳೋಣ ಎಂದು ಹೇಳುತ್ತಲೇ ಇದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ತು 87–88 ನೇ ಸಾಲಿನಲ್ಲಿ ಬ್ಲಾಕ್ ಬೋರ್ಡ್‌ನ ಸ್ಕೀಮ್ ಅಡಿಯಲ್ಲಿ ಬಿಲ್ಡಿಂಗನ್ನು ಕಟ್ಟಲಿಕ್ಕೆ ಒಂದು ಖಾಸಗಿ ಸಂಸ್ಥೆಗೆ ಹತ್ತು ಲಕ್ಷ ರೂಪಾಯಿ ಹಣವನ್ನು ಮುಂಗಡವಾಗಿ ಕೊಟ್ಟಿತ್ತು. ಇಲ್ಲಿಯವರೆಗೂ ಐದು ಸ್ಕೂಲ್ ರೂಮುಗಳನ್ನು ಕಟ್ಟಿಸಿಲ್ಲ. ಈಗಾಗಲೇ ಮೂರು ವರ್ಷವಾಯಿತು. ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ ನಾವೆಲ್ಲಾ ಬರೆಯುತ್ತಿದ್ದೇವೆ, ಈ ಅಸೆಂಬ್ಲಿಯಲ್ಲಿ ವಿಶೇಷ ಚರ್ಚೆಗೆ ಬಂದಾಗ ಕ್ರಮ ತೆಗೆದುಕೊಳ್ಳೋಣ ಎಂದು ಹೇಳಿ ಹೇಳಿ ಅದಕ್ಕೆ ಬೆಲೆ ಇಲ್ಲದಂತೆ ಆಗಿದೆ ಇದರ ಬಗ್ಗೆ ಅವರು ಚಿಂತನೆಯನ್ನು ಮಾಡಿದ್ದಾರೋ ಇಲ್ಲವೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ. ಬಿ. ಬಸವಲಿಂಗಪ್ಪ:– ಸದಸ್ಯರು ಹೇಳಿರತಕ್ಕಂಥ ಮಾತು ಬಹಳ...

ಶ್ರೀ ಸಿ. ಬೈರೇಗೌಡ:– ಆಪರೇಷನ್ ಬ್ಲಾಕ್ ಬೋರ್ಡ್‌ಗೂ ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಮ್‌ಗೂ ಏನು ಸಂಬಂಧ ಇದೆ?

ಶ್ರೀ ಬಿ. ಬಸವಲಿಂಗಪ್ಪ:– ಏನೂ ಇಲ್ಲ.

ಶ್ರೀ ಸಿ. ಬೈರೇಗೌಡ:– ನಾನು ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ:– ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಬ್ಲಾಕ್ ಬೋರ್ಡ್‌ನ ಪ್ರಶ್ನೆ ಈ ಪ್ರಶ್ನೆಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಲಿಲ್ಲ ಈಗ ಹೊಸದಾಗಿ ಹೇಳಿದ್ದಾರೆ. ಇನ್ನು ಮೇಲೆ ಮಾಡೋಣ.

ಶ್ರೀ ಸಿ. ಬೈರೇಗೌಡ:– ವಿಶೇಷ ಘಟಕ ಯೋಜನೆಯಲ್ಲಿ ಕೊಳವೆ ಬಾವಿಗಳನ್ನು ತೋಡಿಸಬೇಕು. ಎನ್ನತಕ್ಕಂಥ ಒಂದು ಕಾರ್ಯಕ್ರಮ ಇದೆ. ಕೆಲವು ಕಡೆ ಕೊಳವೆ ಬಾವಿಗಳನ್ನು ತೋಡಿಸುವುದಕ್ಕೋಸ್ಕರ ಟೆಂಡರನ್ನು ಕರೆದು ಎಲ್ಲಾ ಆಗಿದೆ. ಆದರೆ ಇಲ್ಲಿ ಅವರು ಕೊಳವೆ ಬಾವಿಯನ್ನು ಒಂದು ಮೋಟರ್‌ಗೆ ಇಷ್ಟು ಎಂದು ನಿಗದಿಪಡಿಸಿದ್ದಾರೆ. ಆ ರೀತಿ ನಿಗದಿಪಡಿಸಿರತಕ್ಕಂಥ ಹಣ ಸಾಲದು ಎನ್ನುವ ಕಾರಣಕ್ಕೋಸ್ಕರ ಇವತ್ತು ನೂರಾರು ಕೊಳವೆ ಬಾವಿಗಳನ್ನು ತೋಡಿಸದೆ ಹಣ ಲ್ಯಾಪ್ಸ್ ಆಗಿದೆ ಎನ್ನುವುದೇ ಮುಖ್ಯವಾದಂಥ ಕಾರಣ. ಇಲ್ಲಿ ಕೊಟ್ಟಿರತಕ್ಕಂಥ ಒಂದು ಮೋಟರ್‌ಗೆ 180–200 ರೂಪಾಯಿ ಎಂದು ಎಂದು ಎಷ್ಟೋ ಇದೆ. ಅದು ಸಾಲದು ಎನ್ನುವ ಕಾರಣಕ್ಕೋಸ್ಕರ ಕೊಳವೆ ಬಾವಿಗಳು ಒಂದು ಆಗದೇ ಇರತಕ್ಕಂಥದ್ದು ಆಗಿದೆ. ನಮ್ಮ ಜಿಲ್ಲೆಯಲ್ಲೇ ಆಗಿದೆ, ನನ್ನ ಸ್ವಂತ ಅನುಭವಕ್ಕೂ ಬಂದಿದೆ. ಆದುದರಿಂದ ಇದು ಒಂದು ಮುಖ್ಯವಾದಂಥ ಕಾರ್ಯಕ್ರಮ ಆರ್ಥಿಕವಾಗಿ ಅವರನ್ನು ಅಭಿವೃದ್ಧಿ ಮಾಡತಕ್ಕಂಥ ಕಾರ್ಯಕ್ರಮವಾದುದರಿಂದ ಇಷ್ಟು ಕೊಳವೆ ಬಾವಿಗಳನ್ನು ತೋಡಿಸಿಬೇಕು ಎನ್ನುವ ಒಂದು ನಿರ್ದೇಶನವನ್ನು ಸರ್ಕಾರ ಜಿಲ್ಲಾ ಪರಿಷತ್ತಿನವರಿಗೆ ಕೊಡುತ್ತದೆಯೇ ಹೇಗೆ ಎಂದು ತಮ್ಮ ಮುಖಾಂತರ ಕೇಳುತ್ತೇನೆ.

ಶ್ರೀ. ಜಿ. ಬಸವಲಿಂಗಪ್ಪ:– ಶ್ರೀಮಾನ್ ಬೈರೇಗೌಡರು ಹೇಳಿರತಕ್ಕಂಥದ್ದು ವಿಶೇಷವಾಗಿ ನನ್ನ ಗಮನಕ್ಕೆ ಕೂಡ ಬಂದಿದೆ. ಇದು ಒಂದು ಏಕರೂಪತೆ ಇರತಕ್ಕಂಥ ಕಾರ್ಯಕ್ರಮವಾಗಬೇಕು. ಅದೇ ರೀತಿಯಾಗಿ ಕೊಳವೆ ಬಾವಿಗಳು, ಇರಿಗೇಷನ್ ಬಾವಿಗಳಾಗಲಿ, ಅಥವಾ ಇನ್ನೊಂದು ಎಸ್. ಸಿ. ಪಿ. ಕೊಳವೆಬಾವಿಗಳು ಆಗಲಿ ಇದನ್ನು ರಾಜ್ಯದಾದ್ಯಂತ ಮಾಡಲೇಬೇಕಾಗುತ್ತದೆ. ಇದಕ್ಕೆ ಬಹಳ ಬೇಡಿಕೆ ಕೂಡ ಇದೆ. ಈ ರೀತಿ ಬಾವಿಯನ್ನು ಕೊರೆಯಬೇಕಾದರೆ ಒಂದು ಏಕರೂಪವಾಗಿರತಕ್ಕಂಥ ನೀತಿಯನ್ನು ಹಾಕಿಕೊಳ್ಳಬೇಕು. ಇದನ್ನು ಪ್ರೈವೇಟ್‌ನವರು ಏಜೆನ್ಸಿಯವರು ಮಾಡಬೇಕಾ, ಗೌರ್ನಮೆಂಟ್ ಏಜೆನ್ಸಿಯಿಂದ ಮಾಡಬೇಕಾ ಎನ್ನತಕ್ಕಂಥದ್ದು ಶೀಘ್ರದಲ್ಲಿ ನಾನು ತೀರ್ಮಾನವನ್ನು ತೆಗೆದುಕೊಂಡು ಇದನ್ನು ಜಾಗ್ರತೆಯಾಗಿ ಒಂದು ದೂರಿಗೂ ಅವಕಾಶ ಕೊಡದ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆ.

ಶ್ರೀ. ಬಿ. ರಾಜುಗೌಡ:– ಪ್ರಸಕ್ತ ಸಾಲಿನಲ್ಲಿ 1990–91 ನೇ ಸಾಲಿನಲ್ಲಿ ಎಲ್ಲಾ ಇಲಾಖೆಯ ಮುಖಾಂತರ ವಿಶೇಷ ಘಟಕ ಯೋಜನೆಯಲ್ಲಿ ಎಷ್ಟು ಹಣವನ್ನು ಖರ್ಚು ಮಾಡಬೇಕಾಗಿತ್ತೋ ಅಷ್ಟು ಹಣವನ್ನು ಸಕಾಲದಲ್ಲಿ ಖರ್ಚು ಮಾಡಲಿಕ್ಕೆ ಆಗದೇ ಇದ್ದಾಗ ಬಹುಶಃ ಹಣ ಲ್ಯಾಪ್ಸ್ ಆಗದ ರೀತಿಯಲ್ಲಿ ಆ ಹಣ ಏನು ಉಳಿಯುತ್ತದೆ, ಅದನ್ನು ಬ್ಯಾಕ್‌ಲಾಗ್ ರೀತಿಯಲ್ಲಿ ಪರಿಗಣಿಸಿ ಮುಂದಿನ ವರ್ಷದಲ್ಲಿ ಖರ್ಚು ಮಾಡಲಿಕ್ಕೆ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ. ಬಿ. ಬಸವಲಿಂಗಪ್ಪ:–ಅದು ಸರ್ಕಾರದ ಯೋಜನೆಯಲ್ಲಿದೆ.

ಶ್ರೀ ಬಿ. ಎಚ್. ಬನ್ನಿಕೋಡ್:– ಈ ವಿಶೇಷ ಘಟಕ ಯೋಜನೆಯಲ್ಲಿ ಹಣ ಖರ್ಚಾಗಿಲ್ಲ, ಅದಕ್ಕೆ ಜಿಲ್ಲಾ ಪರಿಷತ್‌ನವರು ಕೆಲಸ ಮಾಡಲಿಲ್ಲ ಎಂದು ಮಾನ್ಯ ಸಚಿವರು ಹೇಳಿದರು ಇದಕ್ಕೆ ಮೂಲ ಕಾರಣ ದಶಲಕ್ಷ ಬಾವಿಯೋಜನೆಯಲ್ಲಿ ಅನೇಕಕಡೆ ರಾಜ್ಯದಲ್ಲಿ ಅಂತರಜಲ ಕಡಿಮೆಯಾಗಿ ಬಾವಿಗಳನ್ನು

ತೆಗೆದರೂ ಕೂಡಾ ನೀರು ಬರುವುದಿಲ್ಲ. ಹೀಗಾಗಿ ಅನೇಕ ಜಿಲ್ಲಾ ಪರಿಷತ್ತಿನಲ್ಲಿ ಬಾವಿ ತೆಗೆದರೂ ನೀರು ಇಲ್ಲ, ನೀರು ಬಹಳ ಆಳಕ್ಕೆ ಹೋಗಿದೆ. ಕೊಳವೆ ಬಾವಿಗಳನ್ನು ತೆಗೆದು ಹರಿಜನ ಗಿರಿಜನರಿಗೆ ಪರಿಶಿಷ್ಟ ಜಾತಿಯವರಿಗೆ ಇದರ ಅನುಕೂಲತೆಯನ್ನು ಮಾಡಿಕೊಡಬೇಕು ಎಂದು ಕೇಳುತ್ತೇನೆ. ಅದಕ್ಕೆ ಈ ದಶಲಕ್ಷ ಬಾವಿ ಯೋಜನೆಯ ಹಣವನ್ನು ಕೊಳವೆ ಬಾವಿಯನ್ನು ಕೊರೆದು ಪರಿಶಿಷ್ಟ ಜಾತಿಯವರಿಗೆ ಅನುಕೂಲವನ್ನು ಮಾಡಿಕೊಡುವುದಕ್ಕೆ ಸರ್ಕಾರ ಇದರ ಬಗ್ಗೆ ಯೋಜನೆಯನ್ನೇನಾದರೂ ಮಾಡುತ್ತಿದೆಯೇ?

ಶ್ರೀ ಬಿ. ಬಸವಲಿಂಗಪ್ಪ:– ಈ ವಿಷಯ ವಿಚಾರದಲ್ಲಿದೆ.

ಅಧ್ಯಕ್ಷರು:– ಮಾನ್ಯ ಶ್ರೀ ಎ.ಟಿ. ರಾಮಸ್ವಾಮಿಯವರೇ, ನಿಮ್ಮ ಪ್ರಶ್ನೆಗೆ ಮಂತ್ರಿಗಳು ಟೈಂ ಕೇಳಿದ್ದಾರೆ.

ಮಾನ್ಯ ಶಿವರಾಮ್‌ರವರೆ ನಿಮ್ಮ ಪ್ರಶ್ನೆಯನ್ನು ಪಿ. ಡಬ್ಲ್ಯೂ ಯ.ಡಿ. ಇಲಾಖೆಗೆ ವರ್ಗಾಯಿಸಲಾಗಿದೆ.

ಶ್ರೀ ಬಿ. ಶಿವರಾಮ್:– ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರತಕ್ಕ ಕೆರೆಕಟ್ಟೆಗಳದ್ದು ಏಕೆ ಈ ನನ್ನ ಪ್ರಶ್ನೆಯನ್ನು ವರ್ಗಾವಣೆ ಮಾಡಿದ್ದೀರಾ? ಇದನ್ನು ಪಿ. ಡಬ್ಲ್ಯೂ ಯ.ಡಿ. ಏತಕ್ಕೆ ವರ್ಗಾಯಿಸಿದ್ದೀರಿ ಎಂದು ನನಗೆ ಅರ್ಥವಾಗಿಲ್ಲ ಮೊನ್ನೆನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ, ಅದು ಸಹ ವರ್ಗಾವಣೆಯಾಗಿದೆ. ಪ್ರಮುಖವಾಗಿ ನನ್ನ ಕ್ಷೇತ್ರದಲ್ಲಿ ಮೈನರ್ ಇರಿಗೇಷನ್ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರತಕ್ಕದ್ದು.

ಶ್ರೀ ಬಿ. ಬಸವಲಿಂಗಪ್ಪ:– ಇದನ್ನು ಪಿ. ಡಬ್ಲ್ಯೂ ಯ.ಡಿ. ಇಲಾಖೆಗೆ ವರ್ಗಾವಣೆ ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು:– ಪ್ರಶ್ನೆಯನ್ನು ವರ್ಗಾವಣೆ ಮಾಡಿರುವುದು ಒಂದು ಇನ್ನೊಂದು ಕೆರೆಗಳು ವರ್ಗಾವಣೆಯಾಗಿರುವುದು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಸಣ್ಣ ನೀರಾವರಿ ಜಿಲ್ಲಾಪರಿಷತ್ತಿನ ಅಧೀನದಲ್ಲಿದೆ. ಮಂತ್ರಿಗಳು ವರ್ಗಾವಣೆ ಮಾಡಿದ್ದಾರೆ. ಇಡೀ ಸಣ್ಣ ನೀರಾವರಿ ಪುನಃ ಜಿಲ್ಲಾ ಪರಿಷತ್ತಿನಿಂದ ವರ್ಗಾವಣೆಯಾಗಿರುವ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಬಿ. ಬಸವಲಿಂಗಪ್ಪ:– ನಾವು ವರ್ಗಾವಣೆ ಮಾಡಿದ ತಕ್ಷಣ ನಿಮಗೆ ಸಂಶಯ ಬಂತು. ಕೆಲವು ಕಾಮಗಾರಿಗಳನ್ನು ಪಿ. ಡಬ್ಲ್ಯೂ ಯ.ಡಿ. ಇಲಾಖೆಗೆ ವರ್ಗಾವಣೆ ಮಾಡುತ್ತಿದ್ದೇವೆ.ಇದರ ಬಗ್ಗೆ ಮಾಹಿತಿ ಬೇಕಾದರೆ ನನ್ನ ಚೇಂಬರಿಗೆ ಬನ್ನಿ ಕೊಡುತ್ತೇನೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ: ಜಿಲ್ಲಾ ಪರಿಷತ್ತಿನಿಂದ ಪಿ. ಡಬ್ಲ್ಯೂ ಯ.ಡಿ. ಗೆ ವರ್ಗಾವಣೆಯಾಗಿರುವ ಬಗ್ಗೆ ಸ್ವಲ್ಪ ಸಂಶಯ ಬಂದಿದೆ. ಮಂತ್ರಿಗಳು ಬದಲಾಗುತ್ತಿರುವುದು ಇದು ಮೂರನೆಯ ಸಲ, ಅದನ್ನು ಸ್ವಲ್ಪ ಸೇರಿಸಿಬಿಡಿ.

ಒಬ್ಬ ಮಾನ್ಯ ಸದಸ್ಯರು:– ಹಾಸನ ತಾಲ್ಲೂಕ್ ಮಾತ್ರ ವರ್ಗಾವಣೆಯಾಗಿದೆಯೋ ಅಥವಾ ರಾಜ್ಯದಲ್ಲಿನ ಕೆರೆಗಳೆಲ್ಲ ಜಿಲ್ಲಾ ಪರಿಷತ್ತಿನಿಂದ ಪಿ. ಡಬ್ಲೂ ಯ.ಡಿ. ಇಲಾಖೆಗೆ ವರ್ಗಾವಣೆಯಾಗಿದೆಯೋ ನನಗೆ ಅರ್ಥವಾಗುತ್ತಿಲ್ಲ.

ಶ್ರವಣಬೆಳಗೊಳದಲ್ಲಿ ನೀರಿನ ಅಭಾವ

418 ಶ್ರೀ ಎನ್.ಬಿ. ನಂಜಪ್ಪ (ಶ್ರವಣಬೆಳಗೊಳ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ಶ್ರವಣಬೆಳಗೊಳ ಕ್ಷೇತ್ರದಲ್ಲಿ ಕುಡಿಯುವ ನೀರಿನ ಕೊಳವೆ ಬಾವಿಗಳ ಸಂಖ್ಯೆ ಎಷ್ಟು, ಇವುಗಳಲ್ಲಿ ಸರಿಯಾಗಿ ಕೆಲಸ ಮಾಡುವ ಕೆಟ್ಟುಹೋಗಿರುವ ಹಾಗೂ ಹಾಳಾಗಿರುವ ಬಾವಿಗಳ ಸಂಖ್ಯೆ ಎಷ್ಟು;

ಆ) ಈಗ ಹೊಸದಾಗಿ ಈ ವರ್ಷ ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ಬರಗಾಲವಿದ್ದರೂ ಇದರ ಬಗ್ಗೆ ಎಷ್ಟು ಕೇಳಿಕೊಂಡರೂ ಸರ್ಕಾರ ಕ್ರಮ ತೆಗೆದುಕೊಳ್ಳದೇ ಇರಲು ಕಾರಣಗಳೇನು;

ಇ) ಶೀಘ್ರವಾಗಿ ಬರಗಾಲಕ್ಕೆ ತುತ್ತಾಗಿರುವ ಈ ಕ್ಷೇತ್ರದ ನೀರಿನ ಬವಣೆಯನ್ನು ಯಾವಾಗ ಸರಿಪಡಿಸಲಾಗುವುದು?

ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು):–

ಅ) ಕುಡಿಯುವ ನೀರಿನ ಬಾವಿಗಳ ಸಂಖ್ಯೆ 1150 ಇವುಗಳಲ್ಲಿ ಸರಿಯಾಗಿ ಕೆಲಸ ಮಾಡುವ ಸಂಖ್ಯೆ 1056 ಕೆಟ್ಟು ಹೋಗಿರುವ ಮತ್ತು ಹಾಳಾಗಿರುವ ಸಂಖ್ಯೆ 94.

ಆ) ಈ ವರ್ಷ ಹೊಸದಾಗಿ 30 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಇವುಗಳಲ್ಲಿ 18 ಸಮಸ್ಯಾತ್ಮಕ ಹಳ್ಳಿಗಳೂ ಸೇರಿವೆ.

ಇ) ಸಮಸ್ಯಾತ್ಮಕ ಹಳ್ಳಿಗಳಿಗೆ ಆದ್ಯತೆಯ ಮೇರೆಗೆ ನೀರು ಪೂರೈಕೆ ಕಾರ್ಯ ಕ್ರಮ ಯೋಜಿಸಿ ನಿರ್ವಹಿಸಲು ಈಗಾಗಲೆ ಜಿಲ್ಲಾ ಪರಿಷತ್‌ಗಳಿಗೆ ಸೂಕ್ತ ಸೂಚನೆ ನೀಡಲಾಗಿದೆ.

SRI N.B. Nanjappa :- Will the Hon'ble Minister for Rural Development and Panchayati Raj be pleased to state the total number of borewells in Shravanabelgola constituency; out of which the total number of borewells functioning ; How many borewells are out of order; how many new borewells dug during this year; The reasons for not taking any action in spite of the request from the people that there is a drought. When the problem in drought stricken constituency will be solved by the Minister?

ಶ್ರೀ ಬಿ. ಬಸವಲಿಂಗಪ್ಪ:– ನೀವು ಕೇಳಿದ ಪ್ರಶ್ನೆ ಅರ್ಥವಾಗಲಿಲ್ಲ

ಶ್ರೀ ಎನ್. ಬಿ. ನಂಜಪ್ಪ:– ಅಧ್ಯಕ್ಷರೆ, ನನ್ನ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಯಿಸಿದ್ದಾರೆ ಅವುಗಳಲ್ಲಿ ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿವೆ? ಕುಡಿಯುವ ನೀರನ್ನು ಒದಗಿಸುತ್ತಿರುವ ಬೋರ್‌ವೆಲ್‌ಗಳ ಸಂಖ್ಯೆ ಎಷ್ಟು ? ಕಳೆದ ಮೂರು ವರ್ಷದಿಂದ ಮಳೆ ಬಾರದಿದ್ದು, ಇದರ ಕಡೆ ಗಮನ